


ಆನಂದ ಪಾಟೀಲ

ಕಲೆ: ಸಂತೋಷ್ ಸಸಿಹಿತ್ಲು




# ಹಾಳಾದ್ದು ನಾಯಿಗಳು !

ನಾಯಿಗಳು ಓಡುತ್ತವೆ ದಿಕ್ಕೆಟ್ಟು
ಅವರ ಕಾರು ಹೋಯಿತೊ
ಅದರ ಹಿಂದೆ
ಇವರ ಬೈಕ್ ಡರ್ ಎಂದಿತೊ
ಅದರ ಹಿಂದೆ
ಅಡರಾಸಿ
ಓಡೇ ಓಡುತ್ತವೆ
ದಿಕ್ಕೆಟ್ಟು
ಓಡೇ ಓಡುತ್ತವೆ,
ಓಡಿ ಓಡಿ ಓಡಿ,
ಸುಸ್ತಾಗಿ
ತೇಕು ಹತ್ತಿ
ಬಸವಳಿದು
ಜೊಲ್ಲು ಸುರಿಸುತ್ತ,
ಕುಕ್ಕರು ಬಡಿಯುತ್ತವೆ...
ಕಾರಿನಲ್ಲಿರುವವರು
ನಮ್ಮ ಜಾತಿಯವರೋ
ಕಾರೇ ನಮ್ಮ ಜಾತಿಯದೋ
ಏನು ಹೊಳೆಯುತ್ತದೆ ಇವಕ್ಕೆ ?
ಇದ್ದಕಿದ್ದಹಾಗೆ,
ಎದ್ದೆನೊ ಬಿದ್ದೆನೊ
ಓಟಕ್ಕಿಳಿಯುತ್ತವಲ್ಲಾ...
ಹಟಕ್ಕೆ ಬಿದ್ದಂತೆ...
ಹೀಗೆ ಓಡುವುದನ್ನು ಬಿಟ್ಟು
ಬೇರೇನೂ ಗೊತ್ತೇ ಇಲ್ಲ ಇವಕ್ಕೆ,
ಪಾಪದವು...

ಯಾರೂ ಇವನ್ನ ನೋಡುವುದೂ ಇಲ್ಲ
ಇವುಗಳ ಕಡೆಗೆ ಕತ್ತು ಹೊರಳಿಸುವುದೂ ಇಲ್ಲ
ಕೊರಳಿಗೆ ದಪ್ಪ ಪಟ್ಟಿ ಹಾಕಿಸಿಕೊಂಡು
ಬೆಳ್ಳಂಬೆಳಗ್ಗೆ, ಡಸ್ಟ ಏಳದ ಸಮಯ
ವಾಕಿಂಗು ಬರುವ
ಮೂಗುದಾರ ಹಿಡಿದವರನ್ನ ಬಿಟ್ಟು
ಅಂಚೂರೂ ಆಚೀಚೆಯಾಗದ
ಪಮೇರಿಯನ್, ಲೆಬ್ರಾಡರ್..
ಝೂಲು ಝೂಲು ನಾಯಿಗಳು,
ಬೆಳ್ಳಗೆ ಬೆಳ್ಳಗೆ ಬೆಣ್ಣಮುದ್ದೆಗಳು,
ಇಂಥವುಗಳಿಂದ
ಕಲಿಯುವುದೇ ಇಲ್ಲ ಮಾರಾಯರೆ ಛೇ,
‘ಹಾಳಾದ್ದು ನಾಯಿ’
ಎಂದೇ ಹಳಿಯಿಸಿಕೊಳ್ಳುವುದನ್ನು ಬಿಟ್ಟು
ಬೇರೇನೂ ಗೊತ್ತೇಇಲ್ಲ,
ಪಾಪದವು,
ಯಡತಾಕಪಟ್ಟೆ ಅಡ್ಡಬಾಕಿ ಬಿಡಾಡಿ...
ಓಡುವುದೊಂದೇ ಕರ್ಮ
ಯಾತಕೀ ಓಟ, ಧಾವಂತ ?
ಕೇಳದಿರಿ...
ಅವು ನಾಯಿಗಳಲ್ಲವೆ...
ನೀವು ಕೇಳುವುದು ಕೇಳಿದರಲ್ಲವೆ ?
ಅವೂ ಹೇಳಲಾರವು...
ಯಾಕೆಂದರೆ ಅವಕ್ಕೂ ಗೊತ್ತು...
ಹೇಳಿದರೇನು ಬಂತು,
ನಿಮಗೂ ಕೇಳುವುದಿಲ್ಲ ಅದು;
ತಿಳಿಯುವುದೂ ಇಲ್ಲವಲ್ಲ!